## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ.3049/2021

ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಹೆಸರು | ಃ ಬೋರಯ್ಯ | ಸಿಡಬ್ಲ್ಯೂ -1 |
| ತಂದೆಯ ಹೆಸರು | ಃ ಪಾಲಯ್ಯ | ಪಿ ಡಬ್ಲ್ಯೂ-1 |
| ವಯಸ್ಸು | ಃ 45 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ನೇಲಗೇತನಹಟ್ಟಿ ಗ್ರಾಮ | ದಿಃ23-05-2024. |

## ಮುಖ್ಯ ವಿಚಾರಣೆ ಃ ಮಾನ್ಯ ಎ.ಪಿ.ಪಿ. ರವರಿಂದಃ

ಚಾಸಾ-7 ರಮತ್ತು ಚಾಸಾ-8 ನನಗೆ ಗೊತ್ತಿಲ್ಲ. ಚಾಸಾ-9 ನನ್ನ ಅಳಿಯ. ಚಾಸಾ-10 ನನಗೆ ಗೊತ್ತು. ಮೃತ ಸುಶ್ಮೀತಾ ನನ್ನ ಮಗಳು, ಅವಳು ಅಪಘಾತದಲ್ಲಿ ಮೃತಳಾಗಿರುತ್ತಾಳೆ. ದಿಃ09-07-2021 ರಂದು ಬೆಳಿಗ್ಗೆ ಸುಮಾರು 10 ರಿಂದ 10-15 ಗಂಟೆಗೆ ನಮ್ಮ ತಂದೆಯನ್ನು ನೋಡಲು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಟಾಟಾ ಎಸಿಯಲ್ಲಿ ನಾನು, ನನ್ನ ಅಪ್ಪ, ನನ್ನ ಅಳಿಯ ಚಾಸಾ-9 ಹಾಗೂ ಚಾಲಕ ಹೋಗುತ್ತಿದ್ದೇವು. ಮತ್ತೆ ಯಾರು ಇರಲಿಲ್ಲ. ಸದರಿ ಟಾಟಾ ಎಸಿಯು ಆರೋಪಿಗೆ ಸೇರಿರುತ್ತದೆ. ಟಾಟಾ ಎಸಿಯ ನಂಬರ ಕೆಎ-16-ಡಿ-3834 ಆಗಿರುತ್ತದೆ. ನೇಲಗೇತನಹಟ್ಟಿ ಕುನಬೇವು ರಸ್ತೆಯಲ್ಲಿ ಹಿರಿಕೆರೆ ಕಾಲುವೆ ಬಳಿ ಚಾಲಕ ಆರೋಪಿಯು ಅಜಾಗರೂಕತೆಯಿಂದ ಟಾಟಾ ಎಸಿ ವಾಹನವನ್ನು ಚಲಾಯಿಸುತ್ತಿದ್ದು ನಾನು ಮತ್ತು ನನ್ನ ಮಗಳು ಹಿಂಬದಿಯಲ್ಲಿ ಕುಳಿತ್ತಿದ್ದು ಆಯತಪ್ಪಿ ಕೆಳಗೆ ಬಿದ್ದಾಗ ನನ್ನ ಮಗಳಿಗೆ ಕತ್ತು ಮುರಿದು ಹೋಗಿ ನಾಯಕನಹಟ್ಟಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನನಗೆ ಹಾಗೂ ಚಾಸಾ-9 ರವರಿಗೆ ಯಾವುದೇ ಪೆಟ್ಟುಗಳು ಆಗಿರಲಿಲ್ಲ. ಆ ದಿನ ಆರೋಪಿಯು ಟಾಟಾ ಎಸಿ ವಾಹನವನ್ನು ಚಾಲನೆ ಮಾಡುತ್ತಿದ್ದ. ಆರೋಪಿಯು ಅತೀವೇಗವಾಗಿ ವಾಹನವನ್ನು ಚಲಾಯಿಸುತ್ತಿದ್ದ.

ಅದೇ ದಿನ 12 ಗಂಟೆಗೆ ನಾಯಕನಹಟ್ಟಿಯಿಂದ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ನನ್ನ ಮಗಳು ಮೃತಳಾಗಿರುತ್ತಾಳೆ. ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರ ಮುಂದೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ1

ಎಂದು, ಸಾಕ್ಷಿಯ ಸಹಿಯನ್ನು ನಿಪಿಃ1(ಎ) ಎಂದು ಗುರುತಿಸಲಾಯಿತು. ದೂರನ್ನು ಚಾಸಾ-10 ರವರು ಬರೆದಿರುತ್ತಾರೆ.

ಸಾಕ್ಷಿಗೆ ಮಹಜರ ಹಾಗೂ ನಕಾಶೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ನಿಪಿಃ2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ2(ಎ) ಎಂದು ಹಾಗೂ ನಕಾಶೆಯನ್ನು ನಿಪಿಃ3 ಎಂದು, ಸಾಕ್ಷಿಯ ಸಹಿಯನ್ನು ನಕಾಶೆಯನ್ನು ನಿಪಿಃ3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾಯಕನಹಟ್ಟಿ ಪೊಲೀಸ ಠಾಣೆಯಲ್ಲಿ ದಿಃ09-07-2021 ರಲ್ಲಿ ಮಾಡಿರುತ್ತೇನೆ.

ಸಾಕ್ಷಿಗೆ 8 ಭಾವಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ಗುರುತಿಸಿದ ಮೇರೆಗೆ ಸದರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿಃ4 ರಿಂದ ನಿಪಿಃ11 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಮರು ಹೇಳಿಕೆಯನ್ನು ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ

ದಿಃ10-07-2021 ರಂದು ನೇಲಗೇತನಹಟ್ಟಿ ಕುನಬೇವು ರಸ್ತೆಯಲ್ಲಿ ಹಿರಿಕೆರೆ ಕಾಲುವೆ ಬಳಿ ಅಪಘಾತ ನಡೆದ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 12-15 ರಿಂದ 1 ಗಂಟೆಯವರೆಗೆ ನನ್ನ ಹಾಗೂ ಚಾಸಾ-7 ಮತ್ತು ಚಾಸಾ-8 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಕೆಎ-16-ಡಿ-3834 ವಾಹನವನ್ನು ಅಮಾನತ್ತು ಪಡಿಸಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಚಾಸಾ-7 ಹಾಗೂ ಚಾಸಾ-8 ರವರ ಸಹಿಯನ್ನು ಸ್ಥಳದಲ್ಲಿ ಪಡೆದಿರುತ್ತಾರೆ ಎಂದರೆ ಸರಿ. ನಿಪಿಃ3 ರಂತೆ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿ ನನ್ನ, ಚಾಸಾ-7 ಮತ್ತು ಚಾಸಾ-8 ರವರ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ನಿಪಿಃ4 ರಿಂದ ನಿಪಿಃ11 ಭಾವಚಿತ್ರಗಳನ್ನು ಮಹಜರ ಸಮಯದಲ್ಲಿ ಸ್ಥಳದಲ್ಲಿಯೇ ತೆಗೆಯಲಾಗಿರುತ್ತದೆ ಎಂದರೆ ಸರಿ. ದಿಃ19-07-2021 ರಂದು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

**ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,**
**ನ್ಯಾಯಾಧೀಶರು, ಚಳ್ಳಕೆರೆ**